<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಶ್ರೀರಂಗಪಟ್ಟಣ</u>

<u>ಸಿ.ಸಿ. 1086/2022</u>

| | |
|---|---|
| ಸಿ.ಡಬ್ಲ್ಯೂ : | 1 |
| ಪಿ.ಡಬ್ಲ್ಯೂ : | 1 |

| | | |
|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮಿ |
| ತಂದೆ/ ಪತಿಯ ಹೆಸರು | : | ನಿಂಗೇಗೌಡ |
| ವಯಸ್ಸು | : | 43 ವರ್ಷ |
| ವೃತ್ತಿ | : | ಮನೆಕೆಲಸ |
| ವಾಸ | : | ಚಿಕ್ಕಅಂಕನಹಳ್ಳಿ |

**<u>ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 29.10.2025</u>**

**<u>ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ</u>**

ನನಗೆ ಆರೋಪಿತರು ಗೊತ್ತಿರುತ್ತಾರೆ. 1 ನೇ ಆರೋಪಿ ನನ್ನ ಗಂಡ ಇರುತ್ತಾರೆ. 2 ನೇ ಆರೋಪಿ ನನ್ನ ಸೋದರಮಾವನ ಮಗ ಇರುತ್ತಾರೆ. ಜಯಮ್ಮ ನನಗೆ ವಾರಗಿತ್ತಿ ಇರುತ್ತಾರೆ.

ಸುಮಾರು 4 ವರ್ಷಗಳ ಹಿಂದೆ ನನ್ನ ಯಜಮಾನರಾದ 1 ನೇ ಆರೋಪಿಯು ಜೈಲಿನಲ್ಲಿ ಇದ್ದರು. ನಾನು ಜೀವನಾಂಶಕ್ಕೆಂದು ಕೇಸು ಹಾಕಿದ್ದೆನು. ನಂತರ 1 ನೇ ಆರೋಪಿಯು ಬಿಡುಗಡೆಯಾಗಿ ಬಂದು ನನ್ನ ಮನೆಯ ಬಳಿ ಏಕೆ ಜೀವನಾಂಶ ಕೊಡಬೇಕೆಂದು ಜಗಳ ಮಾಡಿರುತ್ತಾರೆ. ಆಗ ನಾನು ತರಕಾರಿ ತರಲೆಂದು ಅಂಗಡಿಗೆ ಹೋಗುತ್ತಿದ್ದೆನು.

ತರಕಾರಿ ತೆಗೆದುಕೊಂಡು ವಾಪಸ್ಸು ಮನೆಗೆ ಬರುತ್ತಿದ್ದಾಗ 1 ನೇ ಆರೋಪಿಯು ಮಚ್ಚಿನಿಂದ ನನ್ನ ತಲೆಗೆ ಹೊಡೆದಿರುತ್ತಾರೆ. 2 ನೇ ಆರೋಪಿಯು ದೊಣ್ಣೆ ತೆಗೆದುಕೊಂಡು ಬಂದು ನನ್ನ ಸೊಂಟಕ್ಕೆ ಹಾಗೂ ಕಾಲಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. 3 ನೇ

ಆರೋಪಿಯು ಅವಳನ್ನು ಬಿಡಬೇಡ ಸಾಯಿಸಿಬಿಡು ಎಂದು ನನಗೆ ಜೀವ ಬೆದರಿಕೆ ಸಹಾ ಹಾಕಿರುತ್ತಾರೆ. ನಂತರ ಚಾಸಾ.2 ರವರು ಈ ಜಗಳವನ್ನು ಬಿಡಿಸಿರುತ್ತಾರೆ.

ನಂತರ ನನ್ನ ಮಗ ಅಲ್ಲಿಗೆ ಬಂದಿದ್ದು ನನ್ನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ನಾನು ಮಹಾದೇಶ್ವರ ನರ್ಸಿಂಗ್ ಹೋಂ ಗೆ ದಾಖಲಾಗಿರುತ್ತೇನೆ. ಅಲ್ಲಿ ಪೊಲೀಸರು ನರ್ಸಿಂಗ್ ಹೋಂ ಗೆ ಬಂದಿದ್ದು ಅವರುಗಳು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಈಗ ಹೇಳಿಕೆಯನ್ನು ತೋರಿಸಿದ್ದು, ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಆ ದಿನ ಆರೋಪಿತರು ಈ ವಸ್ತುಗಳಿಂದ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

<u>ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಆಲಿಸಿ ಅನುಮತಿ ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.